ಅ) ಈ ಘಟಕಗಳಿಗೆ ಒದಗಿಸಿರುವ ವಾಹನಗಳ ಸಂಖ್ಯೆ ಕೆಳಕಂಡಂತಿದೆ :

1) ಕೋರಮಂಗಲ	-	78	ವಾಹನಗಳು
2) ಕಿಂಕೋ	-	52	"
3) ದೊಡ್ಡಬಳ್ಳಾಪುರ	-	41	"
4) ಶ್ರೀನಿವಾಸಪುರ	-	46	"
5) ಬೆಳಗಾಂ (ಮಿನಿಘಟಕ)	-	26	"
6) ರಾಣೆಬೆನ್ನೂರು	-	43	"
7) ಬಿಜಾಪುರ 2ನೇ ಘಟಕ	-	18	"
8) ಗುಲ್ಬರ್ಗಾ 3ನೇ ಘಟಕ	-	73	"

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು.

136(219) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು ; ಅವುಗಳ ಪೈಕಿ ಈಗಾಗಲೇ ಸ್ಮಶಾನ ಭೂಮಿಯನ್ನು ಒದಗಿಸಲಾದ ಗ್ರಾಮಗಳ ಸಂಖ್ಯೆ ಎಷ್ಟು?

ಆ) ಉಳಿದ ಗ್ರಾಮಗಳಿಗೆ ಸ್ಮಶಾನ ಭೂಮಿಯನ್ನು ಒದಗಿಸಲು ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು?

ಇ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸ್ಮಶಾನಗಳ ನಿರ್ಮಾಣಕ್ಕೆ ಸ್ಥಳ ಒದಗಿಸಲಾಗಿದೆ? (ಒದಗಿಸಿದ ಭೂಮಿಯ ವಿವರ, ಸಾಧಿಸಿದ ಪ್ರಗತಿ ತಿಳಿಸುವುದು)

ಈ) ಇನ್ನು ಸ್ಥಳ ಒದಗಿಸುವಂತೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಉ) ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 421 ಗ್ರಾಮಗಳಿದ್ದು, ಅವುಗಳ ಪೈಕಿ 389 ಗ್ರಾಮಗಳಲ್ಲಿ ರುದ್ರಭೂಮಿಗಳಿವೆ. ಉಳಿದ 32 ಗ್ರಾಮಗಳಲ್ಲಿ ಸದರಿ ಸೌಲಭ್ಯವನ್ನು ಕಲ್ಪಿಸಬೇಕಾಗಿದೆ.

ಆ) ಗ್ರಾಮಸ್ಥರ ಕೋರಿಕೆಯ ಮೇರೆಗೆ ರುದ್ರಭೂಮಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ 34 ಗ್ರಾಮಗಳಿದ್ದು, ಅವುಗಳಲ್ಲಿ 23 ಗ್ರಾಮಗಳಲ್ಲಿ 51.05 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ.

ಈ) ಒಂದೇ ಒಂದು ಅರ್ಜಿ ಬಾಕಿ ಇದ್ದು ಜಮೀನು ಕಾಯ್ದಿರಿಸಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಉ) ಅಗತ್ಯತೆ ಗಮನಿಸಿ ಸರ್ಕಾರಿ ಜಮೀನು ಲಭ್ಯವಿದ್ದರೆ ಅದನ್ನು ಕಾಯ್ದಿರಿಸುವುದು ಹಾಗೂ ಲಭ್ಯವಿಲ್ಲದ ಕಡೆ ಜಮೀನು ಖರೀದಿಸಿ ಸ್ಮಶಾನ ಸೌಲಭ್ಯವನ್ನು ಕಲ್ಪಿಸಲು ಸರ್ಕಾರಿ ಆದೇಶಗಳಿದ್ದು ಅದರಂತೆ ಕಂದಾಯ ಅಧಿಕಾರಿಗಳು ಕ್ರಮ ಕೈಗೊಳ್ಳುವರು.

ಸುರತ್ಕಲ್ ಕ್ಷೇತ್ರಕ್ಕೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು.

137(231) ಶ್ರೀ ಕುಂಭ್ಳೆ ಸುಂದರ ರಾವ್ *(ಸೂರತ್ಕಲ್)* :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ನಾಲ್ಕು ವರ್ಷಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಸೂರತ್ಕಲ್ ಕ್ಷೇತ್ರಕ್ಕೆ ಮಂಜೂರಾದ ಒಟ್ಟು ಮನೆಗಳು ಎಷ್ಟು;

ಆ) ಇತರೇ ವಸತಿ ಯೋಜನೆಯಡಿಯಲ್ಲಿ ಕ್ಷೇತ್ರಕ್ಕೆ ಮಂಜೂರಾದ ಮನೆಗಳು ಎಷ್ಟು?

ಇ) 1998-99ನೇ ಸಾಲಿನಲ್ಲಿ ನಿಗಧಿಪಡಿಸಿರುವ ಒಂದು ಲಕ್ಷ ಮನೆ ಯೋಜನೆಯಲ್ಲಿ ಸೂರತ್ಕಲ್ ಕ್ಷೇತ್ರಕ್ಕೆ ಮಂಜೂರಾದ ಮನೆಗಳು ಎಷ್ಟು ;

ಈ) 1995-96 ನೇ ಸಾಲಿನಲ್ಲಿ ಆಶ್ರಯ ಮನೆಗಳನ್ನು ನಿಗಧಿಗೊಳಿಸುವಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜಿಲ್ಲೆಯಲ್ಲಿ ಎಷ್ಟು ವಿಧಾನಸಭಾ ಕ್ಷೇತ್ರಗಳನ್ನು ಕೈಬಿಡಲಾಗಿದೆ;

ಉ) ಈ ರೀತಿ ಕೈಬಿಡಲು ಕಾರಣಗಳೇನು?

ಊ) ಈ ತಾರತಮ್ಯದಿಂದ ಉಂಟಾಗುವ ಅನಾನುಕೂಲತೆಯನ್ನು ಗಮನಿಸಿ ಪುನರ್‌ವ್ಯವಸ್ಥೆ ರೂಪಿಸಲಾಗುವುದೇ?